ಕವಿತೆ




**ಸವಿತಾ ನಾಗಭೂಷಣ**

ಕಲೆ: ರೂಪಶ್ರೀ ಕಲ್ಲಿಗನೂರು



# ಮರ ಕೇವಲ ಮರವಲ್ಲ...

ಮರ ಕೇವಲ ಮರ ಅಲ್ಲ!
ನೂರಾರು ಕೊಂಬೆಗಳು
ಸಾವಿರ ಸಾವಿರ ಎಲೆಗಳು
ಪಾತಾಳಕ್ಕಿಳಿದಿದೆ ಬೇರು
ಬಾನೆತ್ತರಕ್ಕೆ ಚಿಮ್ಮಿದೆ ಹಸಿರು

ಸಕಲ ಜೀವ ಸಂಕುಲಗಳ ತಾವು
ಬೇಡದಿದ್ದರೂ ನೀಡುವುದು
ಹೂವು ಹಣ್ಣು ನೀರು ನೆರಳು

ಹಕ್ಕಿಗಳಿಲ್ಲ ಎಂದು ಕೊರಗಬೇಡ
ಒಂದು ಗಿಡ ನೆಡು
ಕೂಗಲೊಂದು ಕೋಗಿಲೆ ಗಿಡ ನೆಡು
ಮಳೆಯಿಲ್ಲ ಎಂದು ಹಲುಬಬೇಡ
ಒಂದು ಗಿಡ ನೆಡು
ಬಿಸಿಗಾಳಿ ನೀಗಲು ತಂಗಾಳಿ ಸೂಸಲು
ಒಂದು ಗಿಡ ನೆಡು

ಮರ ಕೇವಲ ಮರವಲ್ಲ
ಜೀವಜಾಲ,ವ್ಯೋಮ ಲೀಲ
ಮರ ಇದ್ದರೆ ನರ
ಮರವೇ ಹರ ವರ!




Printed and Published by B.A. Ravi on behalf of **The Printers (Mysore) Private Ltd.** Printed at M/s. Rajhan's Enterprises, No.134, 4th Main Road, Industial Town, Rajajinagar, Bangalore - 560 044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560 074. Editor: **K.N. SHANTH KUMAR.**

Editorial Office: 75, M.G. Road, Bengaluru - 560 001, E-mail: editormy@mayura.co.in, Phone: 080-45557333, Editorial: 45557264, Circ: 45557200/220,

© All rights reserved. Reproduction in whole or in part without permission is prohibited.
RNI No 17129/68